© 2013 IJCRT | Volume 1, Issue 1 July 2013 | ISSN: 2320-2882

# ಬಂಡಾಯ ಕಾದಂಬರಿಗಳಲ್ಲಿ ಮಹಿಳಾಸಂವೇದನೆ

# Bandaya Kadambarigalalli Mahila Sumvedane

**Dr. K Anjanappa**
Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ಮಹಿಳೆ ಮೊಟ್ಟ ಮೊದಲ ಬಾರಿಗೆ ಬಂಡೆದ್ದು ಪ್ರತಿಭಟಿಸಿದ್ದು ಬಂಡಾಯ ಸಂದರ್ಭದಲ್ಲಿ. ಹಾಗಾಗಿ ದಲಿತ ಬಂಡಾಯದ ವ್ಯಾಪ್ತಿ ತುಂಬ ವಿಶಾಲವಾದುದು. ಅಸಂಖ್ಯಾತ ಕವಿ–ಕವಯಿತ್ರಿಯರು ಇಲ್ಲಿ ನಮಗೆ ಕಾಣಸಿಗುತ್ತಾರೆ. ಮಹಿಳೆ ಮುಕ್ತವಾಗಿ ತನ್ನ ಅನಿಸಿಕೆಗಳನ್ನು ಇಲ್ಲಿ ಬಿಚ್ಚಿಟ್ಟಿದ್ದಾಳೆ. ಮಹಿಳಾ ಸಮಸ್ಯೆ ಕೇವಲ ಆಕೆಗಷ್ಟೇ ಸೀಮಿತವಾಗಿಲ್ಲ. ಸಾಮೂಹಿಕ ನೆಲೆಯಲ್ಲಿ ಅದನ್ನು ನೋಡಬೇಕಾಗಿದೆ. ಪುರುಷ ಪ್ರಧಾನ್ಯವನ್ನು ಮಾಡುತ್ತಿರುವುದೂ, ಶೋಷಣೆಗೆ ಒತ್ತಡ ತರುತ್ತಿರುವ ಪ್ರಭುತ್ವವನ್ನೂ ಈ ಚಳುವಳಿ ಪ್ರಶ್ನಿಸುತ್ತಾ ಬಂದಿದೆ. ಆದ್ದರಿಂದ ಸ್ತ್ರೀಯರು ಎಂದಿಗಿಂತ ಈ ಯುಗದಲ್ಲಿ ಎಚ್ಚೆತ್ತು ಬರೆದರು.

ಇಲ್ಲಿಯ ಮಹಿಳೆ ತಾನು ತನ್ನ ಸ್ವಂತ ವ್ಯಕ್ತಿತ್ವ, ಅಸ್ತಿತ್ವ ಹೊಂದಬೇಕೆಂಬುದನ್ನು ಮನಗಂಡಿದ್ದಾಳೆ. ಹಿಂದಿನಿಂದಲೂ ತನಗಾದ ಅನ್ಯಾಯವನ್ನು ನಾನಾ ರೀತಿಯಾಗಿ ಪ್ರತಿಭಟಿಸಿ ಅನ್ಯಾಯಕ್ಕೆ ಕಾರಣಗಳನ್ನು ಹುಡುಕಲೆತ್ತಿಸಿದ್ದಾಳೆ. ಎಲ್ಲಾ ರಂಗಗಳಲ್ಲೂ ಆಕೆ ತನ್ನ ಪ್ರತ್ಯೇಕ ಅಸ್ತಿತ್ವವನ್ನು ಸೃಷ್ಟಿಸಿಕೊಳ್ಳುತ್ತಿದ್ದಾಳೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ, ಹೆಣ್ಣಿನ ಮನಸ್ಸು ಕೂಡಾ ಪುರುಷನಿಂದಲೇ ನಿಯಂತ್ರಿತವಾಗಿರುವುದರಿಂದ ಆಕೆ ಇಂದು ಅವನಿಂದ ಮುಕ್ತಿ ಹೊಂದಿ, ತನ್ನನ್ನು ತಾನು ಗುರುತಿಸಿಕೊಳ್ಳುವ ಶೋಧದಲ್ಲಿದ್ದಾಳೆ. ಇದೇ ಸಂದರ್ಭದಲ್ಲಿ ಹೆಣ್ಣನ್ನು ಲೇಖಕರು ಪ್ರದರ್ಶನದ ವಸ್ತುವಾಗಿ, ಲೈಂಗಿಕ ಪ್ರತಿಮೆಯಾಗಿ, ಭಾವ ಶೂನ್ಯವಾದ ಗೊಂಬೆಯನ್ನಾಗಿ ನೋಡಲಿಲ್ಲ. ಹೆಣ್ಣನ್ನು ಮಾನವೀಯ ನೆಲೆಯಲ್ಲಿ ನೋಡಿದರು. ಅವಳ ನೋವುಗಳನ್ನು ಗುರುತಿಸಿದರು. ಅವಳ ಜೊತೆ ತಾವೂ ಧನಿ ಎತ್ತಿದರು. ಸ್ತ್ರೀ ನೋವಿನ ಮೌಲ್ಯವನ್ನು ಶೋಧಿಸಿದರು. ಅದಕ್ಕೆ ಪರಿಹಾರ ಕಾಣುವ ಪ್ರಯತ್ನ ಮಾಡಿದರು. ಶೋಷಣೆಯ ಅರಿವನ್ನು ತಿಳಿವಂತೆ ಆಕೆಯನ್ನು ಎಚ್ಚರಿಸಿದರು. ಹೊಸ ಬದುಕಿನ ಆಶಯವನ್ನು ನೀಡಿದರು. ಸ್ತ್ರೀ ಪರವಾದ ಸಹಾನುಭೂತಿಯಿಂದ, ಮೆಚ್ಚುಗೆಯಿಂದ ಚಿತ್ರಿಸಿದರು. ಗ್ರಾಮಿಣ ಮತ್ತು ನಗರ ಸ್ತ್ರೀಯರಲ್ಲಿ ಉಂಟಾದ ತೊಡಕುಗಳನ್ನು ಅನಾವರಣಗೊಳಿಸಿದರು.

ಬಂಡಾಯದ ಕಾದಂಬರಿಗಳಲ್ಲಿ ಮುಖ್ಯವಾಗಿ ಪರಂಪರಾಗತವಾದ ಮೌಲ್ಯಗಳ ಶೋಧ, ಸ್ತ್ರೀವರ್ತನೆಗಳ ವಿಶ್ಲೇಷಣೆ, ಲೈಂಗಿಕ ಸಂಬಂಧಗಳಲ್ಲಿನ ಯಾಂತ್ರಿಕತೆ, ಹಾದರದ ವ್ಯವಸ್ಥೆ, ಲೈಂಗಿಕ ಶೋಷಣೆ, ತಾಯ್ತನ, ಪಾತಿವ್ರತ್ಯ, ಶೀಲ, ವೈಧವ್ಯ, ಬಂಜೆತನ ಮೊದಲಾದ ಅಂಶಗಳನ್ನು ಗುರುತಿಸುತ್ತೇವೆ. ಆಧುನಿಕ ವಿದ್ಯಾಭ್ಯಾಸದ ಸಫಲತೆಯಿಂದಾಗಿ, ವಸಹಾತುಶಾಹಿಯ ಆಗಮನದ ಫಲವಾಗಿ ಸ್ತ್ರೀ ವಿಮೋಚನೆ ಉಂಟಾಗುತ್ತದೆ. ದಲಿತ ಬಂಡಾಯದ ಸಂದರ್ಭದಲ್ಲಿ ನೂರಾರು ಕಾದಂಬರಿಗಳು ರಚನೆಯಾಗಿದ್ದರೂ, ಅವುಗಳಲ್ಲಿ ಪ್ರಾತಿನಿಧಿಕವಾದ ಕೆಲವು ಕಾದಂಬರಿಗಳನ್ನು ಅಭ್ಯಸಿಸಿ ಸ್ತ್ರೀ ಪರವಾದ ಧ್ವನಿಯನ್ನು ಗುರುತಿಸುವ ಪ್ರಯತ್ನ ಈ ಲೇಖನದ ಉದ್ದೇಶವಾಗಿದೆ. ಪಾರಂಪರಿಕ ಸ್ತ್ರೀ ಸಂವೇದನೆಗಳಾದ ಕೋಮಲತೆ, ಮೃದುತ್ವ, ಅಚಲತನ, ತಾಯ್ತನ, ಪಾತಿವೃತ್ಯ ಗುಣ, ಮೊದಲಾದ ಸ್ವಭಾವಗಳು ಈ ಕಾದಂಬರಿಗಳಲ್ಲಿ ಹೇಗೆ ಚಿತ್ರಿತವಾಗಿದೆ ಎಂಬುದನ್ನು ಪರಿಶೀಲಿಸಬಹುದು.

ಸ್ತ್ರೀಯರು ಬರೆದ ಕಾದಂಬರಿಗಳಲ್ಲಿ ಪ್ರಮುಖವಾಗಿ ಹೆಣ್ಣು; ಸಂಸಾರ, ಗೋಳು, ಕಣ್ಣೀರು, ಪ್ರೀತಿ, ಪ್ರೇಮಗಳ ಸುತ್ತಸುತ್ತಿದರೆ; ಪುರುಷರ ಕಾದಂಬರಿಗಳಲ್ಲಿ ಪ್ರಧಾನವಾಗಿ ಅತ್ಯಾಚಾರ, ಕೊಲೆ, ದೌರ್ಜನ್ಯ, ಸೇಡು ಮತ್ತು ಲೈಂಗಿಕ ಶೋಷಣೆಗೆ ಸ್ತ್ರೀಯರನ್ನು ಬಳಸಿಕೊಂಡಿದ್ದನ್ನು ಕಾಣುತ್ತೇವೆ. ಜೊತೆಗೆ ವ್ಯಭಿಚಾರ; ಪ್ರತಿಭಟನೆ, ಸಮಾನತೆ, ಕೌಟುಂಬಿಕ ಜವಾಬ್ದಾರಿ ಆರ್ಥಿಕ ಅವಲಂಬನೆ, ಅಪಮಾನ ಮೊದಲಾದ ಅಂಶಗಳನ್ನು ನೋಡುತ್ತೇವೆ.

ಕುಂ. ವೀ. ಅವರ 'ಕಪ್ಪು' ಕಾದಂಬರಿಯಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಅಡಿಯಲ್ಲಿ ಸಿಲುಕಿದ ಹೆಂಗಸರು ಮತ್ತು ಅವರ ಮೇಲೆ ನಡೆಯುವ ಅತ್ಯಾಚಾರ, ಅದನ್ನು ಪ್ರಶ್ನಿಸುವ ಎದೆಗಾರಿಕೆಯನ್ನು ಮಾರ್ಮಿಕವಾಗಿ ತಿಳಿಸಲಾಗಿದೆ. ಧರ್ಮದ ಹೆಸರಿನಲ್ಲಿ 'ಬಸವಿ' ಬಿಡುವ ಪದ್ಧತಿಯ ಮೂಲಕ ಕೆಳ ವರ್ಗದ ಕೇರಿಯನ್ನು ಭೋಗದ ವಸ್ತುವನ್ನಾಗಿ ಬಳಸಿಕೊಳ್ಳುವ ಇಲ್ಲಿಯ ಭೂಮಾಲೀಕರ ಕೌರ್ಯ ಬರ್ಭರವಾಗಿದೆ. ಗೌರಿಯ ಮುಗ್ಧತನ ಮತ್ತು ಅಸಹಾಯಕತೆಯ ಹಿನ್ನೆಲೆಗೆ ನಿರಕ್ಷರತೆ ಮತ್ತು ಬಡತನವೇ ಕಾರಣವಾಗಿದೆ. ಅದರಂತೆ ಬರಗೂರರ 'ಸೂತ್ರ' ಕಾದಂಬರಿಯ ಪಾರ್ವತಕ್ಕ ತನ್ನ ಹರೆಯದ ಕಾಲದಲ್ಲಿ ಹಾದರ ಮಾಡಿ ಕ್ಷಯ ಹಂಚಿಕೊಂಡಿದ್ದರಿಂದ ಸುಖ ಜೀವನದಿಂದ ವಂಚಿತಳಾಗಿದ್ದಾಳೆ. ತನ್ನ ಗಂಡನಲ್ಲಿ ಸಿಗದ ಸುಖವನ್ನು ದುಡಿದು ತಿನ್ನುವ 'ಚನ್ನನಿಂದ' ಪಡೆಯುತ್ತಾಳೆ. ಪಾರ್ವತಕ್ಕನ ಪಾತ್ರ ಹೊಸ ಪ್ರಜಾಸತ್ತಾತ್ಮಕ ಮೌಲ್ಯವನ್ನು ಪ್ರತಿಬಿಂಬಿಸುತ್ತದೆ. 'ಸೂರ್ಯ'ದ ಸೀತಕ್ಕನ ಮಾನಸಿಕ ತುಮಲವು ಕ್ರಿಯೆಯಾಗಿ ಮಾರ್ಪಡುವ ರೀತಿ ಹೀಗಿದೆ. 'ಹಾಸಿಗೆ ಮೇಲೆ ಅಡ್ಡಾದಾಗ ವೇದನೆ ಹೊರತಾಗಿ ಒತ್ತಾಸೇಲಿ ತುಡಿತ ಇತ್ತು. ಕಣ್ಣು ಮುಚ್ಚಿಕೊಂಡರೆ, ಕರಿಯ ತೇಲಿ ಬಂದ. ಪಟ್ಟನೆ ಕಣ್ಣು ಕಿತ್ತಳು. ಮನಸ್ಸು ಕಣ್ಣುಕಿತ್ತುಕೊಂಡು ಹಸುಥರಾ ಆಗ್ತಾ ಬಂತು. ಎದೇಲಿ ಒನಕೆ ಕುಟ್ಟಿದಂತಾಯ್ತು' ಎನ್ನುವ ಸಂದರ್ಭ ಅವಳಲ್ಲಿ ಹುರಿಗೊಳ್ಳುವ ಲೈಂಗಿಕ ಆಶಯ ಹೊಸಹುಟ್ಟಿನ ಸ್ಫೋಟಕ ದ್ರವ್ಯವಾಗಿದೆ.

ಚನ್ನಣ್ಣವಾಲೀಕಾರರ 'ಒಂದು ಹೆಣ್ಣಿನ ಒಳಜಗತ್ತು' ಮೇಲ್ಜಾತಿಯ ಹೆಣ್ಣಿನ ಅಂತರಂಗ ತೆರೆದಿಡುವ ಕಾದಂಬರಿಯಾಗಿದೆ. ಗೌಡತಿ ರತ್ನಮ್ಮ ಗೌಡನ ಸುಖದಿಂದ ವಂಚಿತೆಯಾಗಿ ಮನೆಯ ಆಳು ಮಲ್ಯಾನನ್ನು ಒಳಜಗತ್ತಿಗೆ ಕರೆಯುತ್ತಾಳೆ. ಸಮಾಜದ ಕಣ್ಣು ತಪ್ಪಿಸಿ ಇಬ್ಬರೂ ಕೂಡುತ್ತಾರೆ. 'ಮಲ್ಯಾ ನೀ ನನ್ನ ಗಂಡ ಕೊಡೊ ಸುಖ ನನಗ ಕೊಡಲಾಕತ್ತಿದಿ. ಅದಕ್ಕೆ ನೀ ನನ್ನ ಗಂಡನ ಸಮಾನ' ಎನ್ನುವ ರತ್ನಮ್ಮನ ಮಾತು ದಾಂಪತ್ಯದ ಸುಖದಿಂದ ಅತೃಪ್ತಿಗೊಂಡ ಮನಸ್ಥಿತಿಯನ್ನು ಚಿತ್ರಿಸುತ್ತದೆ. ಜಾತೀಯತೆಯನ್ನು ಮಿರಿದ ಪುರುಷ ಶಕ್ತಿಯನ್ನು ಗೌರವಿಸಲು ಮುಂದಾದ ಗೌಡತಿ ಮಲ್ಯಾನಲ್ಲಿ ಧೈರ್ಯ, ಅಭಿಮಾನ, ಆತ್ಮಪ್ರಜ್ಞೆ ಜಾಗೃತಗೊಳಿಸಲು ಪ್ರಯತ್ನಿಸುತ್ತಾಳೆ. ದು. ನಿಂ. ಬೆಳಗಲಿಯವರ 'ದೇವದಾಸಿ' ಮಹತ್ವದ ಕಾದಂಬರಿ. ದೇವದಾಸಿ ಪದ್ಧತಿಯ ಹಿನ್ನೆಲೆಯಲ್ಲಿ ಕೆಳವರ್ಗದ ಹೆಣ್ಣುಗಳ ಶೋಷಣೆ ಮತ್ತು ಅದಕ್ಕೆ ಕಾರಣವಾದ ಅನಕ್ಷರತೆ, ಮೌಢ್ಯ, ಬರಗಾಲ ಬಡತನಗಳಂಥ ಸಾಮಾಜಿಕ ಅಂಶಗಳನ್ನು ವಿವರಿಸುವ ಪ್ರಯತ್ನ ಇಲ್ಲಿದೆ. ಈ ಕಾದಂಬರಿಯಲ್ಲಿ ಬರುವ 'ವಿಮಲ' ಒಂದಿಷ್ಟು ಶಾಲೆ ಕಲಿತವಳು. ಹಾಗಾಗಿ, ದೇವದಾಸಿ ಪದ್ಧತಿಗೆ ತಾನು ಒಳಪಡದೇ ಅದರ ನಿರ್ಮೂಲನಕ್ಕೆ ಪ್ರಯತ್ನಿಸುವ ಆಶಾವಾದವನ್ನು ಪ್ರತಿಪಾದಿಸುತ್ತಾಳೆ.

ಅರಸು ಕುಲದ ಚೆಲುವೆ 'ಮಾಳಗಮ್ಮ' ಹೊಲೆಯರ 'ಸಂಗನ' ಸಂಬಂಧ ಮಾಡಿ ಒಂದು ಮಗುವಿಗೆ ಜನ್ಮಕೊಟ್ಟು ಲೋಕಾಪವಾದಕ್ಕೆ ಹೆದರಿ ಹೆತ್ತ ಮಗುವನ್ನೇ ಕೆರೆಯ ದಂಡೆಯ ಮೇಲಿಟ್ಟು ಆತ್ಮಹತ್ಯೆ ಮಾಡಿಕೊಳ್ಳುವ ದುರಂತ ಚಿತ್ರಣವನ್ನು 'ಮರಣಮಂಡಲ ಮಧ್ಯದೊಳಗೆ' ಕಾದಂಬರಿಯಲ್ಲಿ ಕಾಣುತ್ತೇವೆ. ಈ ಪ್ರಸಂಗಗಳು ಗಂಭೀರವಾದುವು.

ದಲಿತ ಹೆಣ್ಣು ಬಂಗಾರವ್ವನ 'ಹೆಣದ' ಕಾರ್ಯವನ್ನು ಕೇಂದ್ರವಾಗಿರಿಸಿಕೊಂಡು ರಚಿತವಾದ 'ಕಾರ್ಯ' ಕಾದಂಬರಿ ಅನೇಕ ಸಂವೇದನೆಗಳನ್ನು ದಾಖಲಿಸಿ ಕೊಂಡಿದೆ. ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ಹೆಂಗಸರ ಶೋಷಣೆ ಹೇಗೆ ನಡೆಯುತದೆ ಎಂಬುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಬಂಗಾರದಂತಹ ಹೆಸರಿನ ಬಂಗಾರವ್ವನ ಸಾವಿನ ಬಗ್ಗೆ ಅನುಕಂಪ ವ್ಯಕ್ತವಾದರೂ ಕ್ರಿಯೆಯಲ್ಲಿ (ಕಾರ್ಯ) ನಿಷ್ಕರುಣೆ ವ್ಯಕ್ತವಾಗುತ್ತದೆ. ಆದ್ದರಿಂದಲೇ ಹೆಣ್ಣಿನ ಬಗೆಗಿನ ನಿಷ್ಕರುಣೆಯ ಪ್ರತಿರೂಪ ಎನ್ನುವಂತೆ ಬಂಗಾರವ್ವನ ಹೆಣ ಗೋರಿಯಿಂದ ಹೊರಬೀಳುತ್ತದೆ. ದಲಿತ ಹೆಣ್ಣೊಬ್ಬಳ ಮೂಲಕ ದಲಿತ ಬದುಕಿನ ಸ್ಥಿತಿಯನ್ನು ಅನಾವರಣ ಮಾಡುವ 'ಒಡಲಾಳ' ಕಾದಂಬರಿ ತಾನು ಸಾಕಿದ ಕೋಳಿಯನ್ನು ಕಳೆದುಕೊಂಡು, ಅದನ್ನು ಹುಡುಕುವ ಕ್ರಿಯೆಯಲ್ಲಿ ಆರಂಭವಾಗುತ್ತದೆ. ಸಾಕವ್ವ ತನ್ನ ಕುಟುಂಬವನ್ನು ನಿಭಾಯಿಸಿಕೊಂಡು, ಹೊರಗಿನ ಒತ್ತಡವನ್ನೂ ಎದುರಿಸಿದಳು. ಹೀಗಾಗಿ, ಸಾಕವ್ವನಲ್ಲಿ ಕಾಣುವ ಮುಗ್ಧತೆ, ಪ್ರೀತಿ, ದುಃಖ, ಬೈಗುಳಗಳ ಮೂಲಕ ಕಾದಂಬರಿ

ಪ್ರಕಟಗೊಳ್ಳುತ್ತದೆ. ಈ ಕಾರಣದಿಂದಾಗಿ ಅವಳು ವ್ಯವಸ್ಥೆಯೊಳಗೆ ಎಲ್ಲವನ್ನೂ ಕಳೆದುಕೊಳ್ಳುತ್ತಾಳೆ. ಪುಟ್ಟ ಗೌರಿಯ ಯೌವ್ವನ, ಸಾಕವ್ವನ ಸ್ವಾಭಿಮಾನ, ಅತ್ತೆ–ಸೊಸೆ, ತಾಯಿ ಮಗನ ಕಲಹಗಳು, ಅವರ ಜೀವನದಲ್ಲಿ ಸಾವಯವ ಸಂಬಂಧಗಳನ್ನು ಹೊಂದಿವೆ. ಸಾಕವ್ವ ಕುಟುಂಬದ ಯಜಮಾನಿಯಾಗಿ ನಿರ್ವಹಿಸಿದ ಸಂದರ್ಭದಲ್ಲಿ ಒಮ್ಮೆ ತನ್ನ ಕಿರಿಯ ಮಗ ಸಣ್ಣಯ್ಯ ರಾವಣಾಸುರನಂತೆ ನಿಂತು ಆಸ್ತಿ ಕೇಳಿದಾಗ ಸಾಕವ್ವ ಹೇಳಿದ ಮಾತು "ಹದುಗೇಲಿ ನಾರು ನೀರು ಕುಡುದು ಮಗನ ದಿಕ್ಕ ಕಣ್ಣ ಮೆಡರಿಸಿ ಕೇಳ್ತನೀ ಯಾಕೆ? ಅಂದಳು. ಸಣ್ಣ ಕಡ್ಡಿ ಮುರಿದಂತೆ, ನಾನು ಅಕ್ಕುದಾರ ಅಂದ. ಸಾಕವ್ವಗೂ ಕೆಮ್ಮಿ ಕಾನೂನು ಗೊತ್ತಿರಲಿಲ್ಲ, ಏನೆಂದರೆ ಇನ್ನೊಂದ್ಸಲ ಅನ್ನು...... ಅಕ್ಕುದಾರನ ನೀನು? ಹುಟ್ಟುದ್ದು ಹೆಣ್ಣಿಂಗ್ಗಾದರೂ ಗಂಡ್ಸ ಮೀರ್ಸಿ ಕಚ್ಚೆಕಟುಕೊಂಡು ಗೇದು ಸಂಪಾದ್ಸಿವ್ನಿ ಕನೊ ಭೂಪತಿ, ಆಸ್ತಿ ನನ್ನ ಸ್ವಾರ್ಜತೆ ಅಂದಳು". ಆಸ್ತಿಯ ಹಕ್ಕನ್ನು ಉಳಿಸಿಕೊಳ್ಳುವ ಸಾಕವ್ವನು ನಮಗೆ ಹೋರಾಟದ ಮಹಿಳೆಯಾಗಿ ಕಾಣುತಾಳೆ.

ಸ್ತ್ರೀ ಪ್ರಧಾನವಾದ ಕಾದಂಬರಿ 'ಕುಸುಮಬಾಲೆ'. ದಲಿತ ಹೆಣ್ಣುಗಳ ದಾರುಣ ಸ್ಥಿತಿಯನ್ನು ಚಿತ್ರಿಸುವ ಈ ಕಾದಂಬರಿಯ ನಾಯಕಿ 'ಕುಸುಮಬಾಲೆ'. ಈಕೆ ಸವರ್ಣೀಯ ಹೆಣ್ಣು ಮಗಳು. ಅವಳ ಕುಲದ ಬೇರುಗಳು, ವರ್ಣಸಂಕರದಿಂದ ಅದೂ ಅಸ್ಪೃಶ್ಯ ಯುವಕನ ಸಂಪರ್ಕದಿಂದ ಒಂದು ಕರುಳ ಕುಡಿಯನ್ನು ಪಡೆಯುತ್ತಾಳೆ. ಹೆಣ್ಣು–ಗಂಡು ಸಂಬಂಧದಲ್ಲಿ ವರ್ಣವ್ಯವಸ್ಥೆಯನ್ನು ಮಿರುವ ಪರಿಕ್ರಮ ಇಲ್ಲಿ ವಿಶಿಷ್ಠವಾಗಿ ಮೂಡಿದೆ. ಗಂಡ ಸತ್ತ ಹನ್ನೆರಡು ತಿಂಗಳ ಮೇಲೆ ಯಾಡನಿಗೆ ಜನ್ಮ ನೀಡಿದವಳು ಅಕ್ಕ ಮಹಾದೇವಮ್ಮ. ಇಂಥಹ ಅಕ್ರಮ ಸಂಬಂಧದಿಂದ ಅಪವಾದ ಹೂತ್ತು, ಭಾವ–ಮೈದುನರ ತಿರಸ್ಕಾರಕ್ಕೆ ಗುರಿಯಾಗುತ್ತಾಳೆ. ಇದರಂತೆ ಇಡೀ ಕಾದಂಬರಿ ಮಹಿಳೆಯನ್ನೇ ಮುಖ್ಯವಾಗಿರಿಸಿಕೊಂಡು ನಡೆಯುತ್ತದೆ. ತನ್ನ ಮಗುವನ್ನು ಉಳಿಸಿಕೊಳ್ಳಲು ಇದಿಯಮ್ಮನೊಡನೆ ಗುದ್ದಾಡುವ ತೂರಮ್ಮ ಮತ್ತು ಯಾಡನನ್ನು ಕಂಕುಳಲ್ಲಿಟ್ಟುಕೊಂಡು ಪರಿಪಾಟಲು ಪಡುವ ಅಕ್ಕಮಹಾದೇವಿ ಇಲ್ಲಿ ಮುಖ್ಯರು.

ಕುಸುಮಬಾಲೆ, ಕೆಂಪಿ, ಶಾಸ್ತ್ರೀಯ ಮಗಳು ಸಾವಿತ್ರಿ, ಆಚಾರ್ಯರ ಮಗಳು ಭಗವತಿ ಇವರೆಲ್ಲ ಅನ್ಯ ಗಂಡುಗಳ ಜೊತೆ ಸಂಬಂಧ ಹೊಂದಿದವರು. ಹೆಚ್ಚಾಗಿ ಕೆಳಜಾತಿಯ ಬಾಹುಗಳನ್ನೆ ಇಷ್ಟ ಪಡಲಿಚ್ಚಿಸಿದವರು.

ದಲಿತ ಸಂವೇದನೆ ಮತ್ತು ಸ್ತ್ರೀ ಸಂವೇದನೆಗಳ ವಿಶೇಷ ಕೃತಿ 'ಮಾಗಿ'. ದಲಿತ ಹೆಣ್ಣಾದ 'ಮಾಗಿ', ಹೆಂಡತಿಯಾಗಿ, ಅತ್ತಿಗೆ ನಾದಿನಿಯಾಗಿ, ತಾಯಿಯಾಗಿ ಎಲ್ಲಾ ನೋವುಗಳನ್ನು ಸಹಿಸಿಕೊಂಡು, ದಲಿತ ಶಕ್ತಿಯ ಅದಮ್ಯ ಚೇತನದಂತೆ ಇಲ್ಲಿ ಚಿತ್ರಿತವಾಗಿದ್ದಾಳೆ. ಗಂಡನ ಅಶ್ಲೀಲ ಮಾತುಗಳನ್ನು, ದೈಹಿಕ ಶಿಕ್ಷೆಯನ್ನು ಸಹಿಸಿಕೊಂಡು ಸಹನೆ, ತ್ಯಾಗದ ಸಂಕೇತವಾಗಿದ್ದಾಳೆ. ಅನೇಕ ಅಪಮಾನಗಳ ನಡುವೆಯೂ ಅದಮ್ಯ ಆಸೆಯನ್ನಿಟ್ಟುಕೊಂಡು ಬದುಕುವ ಮಾಗಿ ಇಲ್ಲಿ ದೈತ್ಯ ಪ್ರತಿಭೆಯ ಪ್ರತೀಕವಾಗಿದ್ದಾಳೆ.

'ಗತಿ' ಕಾದಂಬರಿಯಲ್ಲಿ ಗಂಡಸರ ಕ್ರೂರ ವರ್ತನೆಯಿಂದ ನಲುಗಿದ ಸೋನಿ ಮತ್ತು ಲಚ್ಚಿ ಪಾತ್ರಗಳು ಸ್ತ್ರೀ ಪ್ರಜ್ಞೆಯ ಪ್ರತೀಕವಾಗಿ ಮೂಡಿಬಂದಿವೆ. ನ್ಯಾಯವೇ ಇಲ್ಲದ ವ್ಯವಸ್ಥೆಯ ನಡುವೆ ಒಳ್ಳೇಯವರು ಬದಕುವುದೇ ದುರ್ಭರ ಎನಿಸಿದಾಗ, ಲಚ್ಚಿ ದುಷ್ಟನನ್ನು ಕೊಲ್ಲಲು ತಯಾರಾಗುತ್ತಾಳೆ. ತನ್ನ ಗಂಡ ದುಷ್ಟನಾಗಿರುವುದರಿಂದ ಅವನ ಮನೆಗೆ ಕಾಲಿಕ್ಕುವುದಿಲ್ಲವೆಂದು ಸೋನಿ ಊರಿನ ಪಂಚಾಯ್ತಿ ಕಟ್ಟೆಯಲ್ಲಿ ಗಟ್ಟಿಯಾಗಿ ಹೇಳುತ್ತಾಳೆ. ಜೊತೆಗೆ ಈ ಕಾದಂಬರಿಯಲ್ಲಿ ಬರುವ ಹೆಂಗಸರು ತಮ್ಮ ವೈಯಕ್ತಿಕ ಬದುಕನ್ನು ಸ್ವಾಭಿಮಾನಕ್ಕಾಗಿ ಧಿಕ್ಕಿಸಿಕೊಳ್ಳುವ ಹಟವನ್ನು ಹೊಂದಿದವರಾಗಿದ್ದಾರ.

ಇದರಂತೆ 'ನೆಲೆಬೆಲೆ' ಕಾದಂಬರಿಯೂ ಮುಖ್ಯವಾದುದು. ಹೆಣ್ಣಿನ ಸ್ವಾತಂತ್ರ್ಯ ರಕ್ಷಿಸುವ ಈ ಕಾದಂಬರಿಯ ನಾಯಕಿ 'ಜಯಾ', ಈಕೆ ತಾನು ಮೆಚ್ಚಿದವನನ್ನು ಪ್ರೀತಿಸಿ, ಅವನನ್ನು ಪಡೆಯಲಾಗದೆ ಜಮಿನ್ದಾರ ಮಗನ ಕೈ ಹಿಡಿದು ಅಸುಖಿಃಯಾಗಿರುತ್ತಾಳೆ. ತನ್ನಿಂದ ಮಕ್ಕಳಾಗದೇ ಇದ್ದಾಗ, 'ಸಾವಿತ್ರಿ' ಎಂಬ ಹುಡುಗಿಯನ್ನು ಹುಡುಕಿ ತನ್ನ ಗಂಡನಿಗೆ ಮದುವೆ ಮಾಡಿಸಿ, ತಾನು ನಗರಕ್ಕೆ ಬರುತ್ತಾಳ, ಆದರೆ ನಗರದಲ್ಲಿ ಅತ್ಯಾಚಾರಕ್ಕೆ ಒಳಗಾಗುತ್ತಾಳೆ. ಹೀಗೆ ಪುರುಷ ಪ್ರಧಾನವಾದ ಸಮಾಜದಲ್ಲಿ ಹೆಣ್ಣಿನ ಮೇಲಾಗುತ್ತಿರುವ ನಿರಂತರ ಶೋಷಣೆ, ಅಪಮಾನ ಅನ್ಯಾಯಗಳನ್ನು ಈ ಕಾದಂಬರಿಯಲ್ಲಿ ಕಾಣಬಹುದು.

ವೀಣಾ ಶಾಂತೇಶ್ವರ ಅವರ ಕಾದಂಬರಿ 'ಗಂಡಸರು ಹಾಗೂ ಶೋಷಣೆ ಬಂಡಾಯ ಇತ್ಯಾದಿ......' ಸ್ತ್ರೀ ಸಂವೇದನೆಯನ್ನು ಗಾಢವಾಗಿ ಹೇಳುವ ಕೃತಿಯಾಗಿದೆ. ಗಂಡಿನ ಸಂಕುಚಿತತೆಯ ವಿರುದ್ಧ ಬಂಡಾಯ ಮಾಡಲು ಹೊರಟ ಡಾ॥ ಶಶಿ ಕೊನೆಗೆ ದಾಂಪತ್ಯ ಜೀವನವೇ ತನಗೆ ಅನಿವಾರ್ಯವೆಂದು ತೀರ್ಮಾನಿಸುತ್ತಾಳೆ. ಬದುಕನ್ನು ವ್ಯವಹಾರಿಕವಾಗಿ ಸ್ವೀಕರಿಸುವ ಶಶಿಯ ಈ ಕೇಂದ್ರ ಪ್ರಜ್ಞೆ ಹಲವು ಸ್ತ್ರೀಯರ ಬದುಕುಗಳನ್ನು ಕೆದರಿ ನೋಡುತ್ತದೆ. ಹೆಣ್ಣಿನ ವೈಯಕ್ತಿಕ ದುರಂತವನ್ನು ಅಸಹಾಯಕ ರೀತಿಯಲ್ಲಿ ಒಪ್ಪಿಕೊಳ್ಳುವಂತಹ ಸಾಂಪ್ರದಾಯಿಕ ದೃಷ್ಟಿ ಇಲ್ಲಿದೆ.

ಗೀತಾ ನಾಗಭೂಷಣರ 'ಹಸಿ ಮಾಂಸ ಮತ್ತು ಹದ್ದುಗಳು' ಕಾದಂಬರಿಯ ಲಚ್ಚಿ ಹರಯಕ್ಕೆ ಕಾಲಿಡುವುದೇ ತಡ ಸುತ್ತಲಿನ ಗಂಡುಗಳ ಕ್ರೌರ್ಯ, ವಂಚನೆಗೆ ತುತ್ತಾಗುತ್ತ ಬೆಳೆಯುತ್ತಾಳೆ. ಹಸಿ ಮಾಂಸಕ್ಕೆ ಎರುಗುವ ಹದ್ದುಗಳನ್ನು ಲಚ್ಚಿ ಎಷ್ಟೇ ಓಡಿಸಿದರೂ ಪ್ರಕೃತಿ ಅವಳನ್ನು ಸೋಲಿಸುತ್ತದೆ. ಹುಟ್ಟಿದ ಗಂಡು ಮಗು ಮುಂದೊಮ್ಮೆ ಹದ್ದಾಗಬಹುದೆಂದು ಹೆದರುವ ಈ ಹೆಣ್ಣು ತನ್ನ ಕೂಸನ್ನೇ ಕೈಯಾರೆ ಕೊಲ್ಲುತಾಳೆ. ಇದು ತಾಯ್ತನದ ದಾರುಣ ಚಿತ್ರಣ.

ಬಂಡಾಯ ದಲಿತ ಚಳುವಳಿಯೊಂದಿಗೆ ಬೆಳೆದ ಮುಸ್ಲಿಂ ಬರಹಗಾರರ ಕಾದಂಬರಿಗಳು ತಮ್ಮ ಅನನ್ಯತೆಯನ್ನು ಈಗಾಗಲೇ ಸ್ಥಾಪಿಸಿವೆ. ಬೊಳುವಾರು ಮಹಮ್ಮದ್ ಕುಂಞ, ಸಾರಾ ಅಬೂಬಕರ್ ಮತ್ತು ಫಕೀರ್ ಮಹಮ್ಮದ್ ಕಟ್ಪಾಡಿಯವರು ತಮ್ಮ ವಿಶಿಷ್ಟ ಕಾದಂಬರಿಗಳಿಂದ, ಜನಪರ ನಿಲುವುಗಳಿಂದ ಈಗಾಗಲೇ ಖ್ಯಾತರಾಗಿದ್ದಾರೆ. ಕನ್ನಡ ಕಾದಂಬರಿ ಸಾಹಿತ್ಯ ವಿಭಿನ್ನ ಸಂಸ್ಕೃತಿಯಿಂದ ಅನುಭವಗಳನ್ನು ಪಡೆದುಕೊಂಡಂತೆ, ಮುಸ್ಲಿಂ ಅನುಭವಗಳನ್ನು ಮೈಗೂಡಿಸಿಕೊಂಡಿದೆ. ಕನ್ನಡಕ್ಕೆ ಅಪರಿಚಿತವಾಗಿದ್ದ ಮುಸ್ಲಿಂ ಸಂಸ್ಕೃತಿಯ ಅನೇಕ ಸಂವೇದನೆಗಳು ಪರಿಚಿತವಾದವು. ತಾವು ಹುಟ್ಟಿ ಬಂದ ಜನಾಂಗದ ಇತಿ–ಮಿತಿಗಳನ್ನು ವೈಶಿಷ್ಟತೆಗಳನ್ನು ಹೇಳುತ್ತಲೇ ಒಟ್ಟು ಜನ ಸಮುದಾಯದ ಆಶಯಗಳನ್ನು ದಾಖಲಿಸಿದ್ದಾರೆ.

ಸಾರಾ ಅಬೂಬಕರ್ ಅವರ 'ಚಂದ್ರಗಿರಿಯ ತೀರದಲ್ಲಿ' ಮತ್ತು 'ಸಹನಾ' ಕಾದಂಬರಿಗಳು ಮುಸ್ಲಿಂ ಜನಾಂಗದ ಸ್ತ್ರೀ ಸಂವೇದನೆಗಳನ್ನು ಶೋಧಿಸುತ್ತವೆ. 'ಚಂದ್ರಗಿರಿಯ ತೀರದಲ್ಲಿ' ಕಾದಂಬರಿ ಆರ್ಥಿಕ ಪರಾಧೀನತೆಯಲ್ಲಿರುವ ಹೆಣ್ಣನ್ನು ಧರ್ಮದ ಹೆಸರಿನಲ್ಲಿ ಹತ್ತಿಕ್ಕಿರುವುದನ್ನು ಬಿಚ್ಚಿ ತೋರಿಸುತ್ತದೆ. ಧಾರ್ಮಿಕ, ಕೌಟುಂಬಿಕ ಒತ್ತಡಗಳ ನಡುವೆ ವಿವಾಹಿತೆ ಸಿಕ್ಕಾಗ ಸಾವೇ ಗತಿ ಎಂದು ನಿರ್ಧರಿಸುವ 'ನಾದಿರಾ' ಈ ಕಾದಂಬರಿಯ ನಾಯಕಿ. ಮುಗ್ಧಳಾದ, ಅಸಹಾಯಕತೆಯ ಪ್ರತೀಕದಂತಿರುವ ನಾದಿರಾ ಯಾಂತ್ರಿಕವಾಗಿ ಬಡುಕು ಸಾಗಿಸುತಾಳೆ ವಿನಃ ತಂದೆ–ಗಂಡನನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳುವುದಿಲ್ಲ. ಖಾನರು ಬೇರೆ ಮದುವೆ ವಿಷಯ ಮಾತನಾಡಿದಾಗ ಮಾತ್ರ ನಾದಿರಾ ಪ್ರತಿಭಟಿಸುತ್ತಾಳೆ. ಈ ಪ್ರತಿಭಟನೆ ಅಸಹಾಯಕತೆಯಿಂದ ಹೊರ ಹೊಮ್ಮಿದ್ದು. "ನೀನು ನನಗೆ ಒಂದು ಮದುವೆ ಮಾಡಿಸಿದ್ದು ಸಾಕು. ನೀವೇನಾದರೂ ನನಗೆ ಇನ್ನೊಮ್ಮೆ ಮದುವೆ ಮಾಡಲು ಪ್ರಯತ್ನಿಸಿದರೆ, ನಾನು ಚಂದ್ರಗಿರಿಯಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತೇನೆ. (ಕಾದಂಬರಿ ಪು. 47) ಎನ್ನುತ್ತಾಳೆ.

ವ್ಯವಸ್ಥೆಯ ಸುಳಿಯಲ್ಲಿ ಸಿಕ್ಕ ಹೆಣ್ಣುಗಳು ಕೊನೆಗೆ ಬಿಡುಗಡೆಗೊಳ್ಳುವುದು ಸಾವಿನ ಸನ್ನಿಧಾನದಲ್ಲಿಯೇ ಎನ್ನುವುದು ಈ ಕಾದಂಬರಿಯಲ್ಲಿ ವ್ಯಂಗ್ಯವಾಗಿ ಚಿತ್ರಿತವಾಗಿದೆ. ನಾದಿರಾಳ ತಂದೆ ಮತ್ತು ಗಂಡ ಈ ಇಬ್ಬರು ಪುರುಷರು ಇತರರು ಮಾಡಿದ ತಪ್ಪಿಗಾಗಿ ತನ್ನ ಬದುಕಿನಲ್ಲಿ ಅತೀವ ನೋವನ್ನುಂಡು, ಕೊನೆಗೆ ಈ ವ್ಯವಸ್ಥೆಯ ಮೌಢ್ಯತೆಗೆ, ಅದರ ಸ್ವಾರ್ಥತನಕ್ಕೆ ಬೇಸತ್ತು ನದಿಯಲ್ಲಿ ಹಾರಿ ಪ್ರಾಣ ಬಿಡುತ್ತಾಳೆ. ಇದು ದುರಂತ ಕತೆಯೆನಿಸಿದರೂ, ಯಾವ ತಪ್ಪೂ ಮಾಡದೆ ಬದುಕಿನ ತುಂಬ ನೋವನ್ನು ಅನುಭವಿಸುತ್ತಿರುವ ಹತಾಶಭಾವದ ಹೆಣ್ಣೊಬ್ಬಳ ಹೃದಯಸ್ಪರ್ಶಿ ಸಂವೇದನೆ ಇದಾಗಿದೆ. 'ಸಹನ' ಕಾದಂಬರಿಯ 'ನಸೀಮ', 'ಚಂದ್ರಗಿರಿಯ' ನಾದಿರಾಳ ಮುಂದಿನ ಬೆಳವಣಿಗೆಯಾಗುತ್ತಾಳೆ. ಇದು ಮುಸ್ಲಿಂ ಮಹಿಳೆಯಲ್ಲಿಯ ಸ್ತ್ರೀತ್ವದ ಜಾಗೃತಿಯನ್ನು ತೋರಿಸುತ್ತದೆ. ಇವಳು ಗಂಡನ ಸ್ವೇಚ್ಛಾಚಾರವನ್ನು ಖಂಡಿಸುತ್ತಾಳೆ. ಹಾಗಾಗಿ ನಸೀಮಳ ಬದುಕುವ ಛಲ, ಆತ್ಮಗೌರವ, ಜೀವನೋತ್ಸಾಹ ನಿಜಕ್ಕೂ ಮೆಚ್ಚುವಂತದ್ದು. ಶತಮಾನಗಳಿಂದ ಸಂಪ್ರದಾಯದ ಸರಳುಗಳಲ್ಲಿ ಬಂಧಿಯಾಗಿ ಮಾತು ಕಳೆದುಕೊಂಡ ನಸೀಮಳಂಥವರು, ಇಲ್ಲಿ ಧನಿ ಎತ್ತಿ ಮಾತನಾಡುವುದರ ಜೊತೆಗೆ ಮುಖವೆತ್ತಿ ಬಾಳಲೆತ್ನಿಸುತ್ತಾರೆ. ಅಂತೆಯೇ ನಸೀಮಳಂತಹ ಪಾತ್ರಗಳು ಮನುಷ್ಯರ ಅದಮ್ಯ ಚೇತನಕ್ಕೆ ಹಿಡಿದ ಕನ್ನಡಿಯಂತಿವೆ. 'ನಾದಿರಾ' ಪುರುಷ ಪ್ರಧಾನ

ವ್ಯವಸ್ಥೆಯ ಗೆರೆಗಳನ್ನು ದಾಟದೆ ಮೌನವಾದರೆ; 'ನಸೀಮ' ಆ ಎಲ್ಲಾ ಗೆರೆಗಳನ್ನು ದಾಟುವುದರ ಮೂಲಕ ಬದುಕಿನ ಮಹತ್ವವನ್ನು ಸಾರಿ ಹೇಳುತ್ತಾಳೆ.

'ಸಹನಾ' ಕಾದಂಬರಿಯ ನಸೀಮಳು ತೆಗೆದುಕೊಳ್ಳುವ ತೀರ್ಮಾನ ಒಂದು ರೀತಿಯಾದರೆ; 'ಸರಕುಗಳು' ಕಾದಂಬರಿಯ ನಫೀಸಾ ತೆಗೆದುಕೊಳ್ಳುವ ನಿರ್ಣಯ ಮತ್ತೊಂದು ರೀತಿಯಿಂದ ಮಹತ್ವದ್ದಾಗುತ್ತದೆ. ಸಲೀಮಾ, ಆಯಿಷಾಳಿಗೆ ತಲ್ಲಾಕ್ ಕೊಟ್ಟು ಮತ್ತೆ ತನ್ನ ಹತ್ತಿರ ಬಂದಾಗ ತನ್ನ ಪ್ರೀತಿಯೊಂದಿಗೆ ತನ್ನ ಧೋರಣೆಯನ್ನು ಸ್ಪಷ್ಟಪಡಿಸುತ್ತಾಳೆ. 'ಮದುವೆಯಾಗುವುದಾದರೆ ಕದ್ದುಮುಚ್ಚಿ ಗುಟ್ಟಿನಲ್ಲಿ ಆಗ ಕೂಡದು. ಗುಡಿಸಲು ಗೇರಿಯ ಹೆಣ್ಣು ನಾನು. ಎಲ್ಲ ಗೌರವದೊಂದಿಗೆ ನಿಮ್ಮೊಂದಿಗೆ 'ನಿಕಾಹ' ಆಗಿ ಬರಬೇಕು' ಎಂದು ಸಲೀಮನಿಗೆ ಹೇಳುವಲ್ಲಿ ನಫೀಸಾಳ ಧೈರ್ಯ ಮತ್ತು ಬದುಕಿನ ಬಗೆಗೆ ಅವಳು ಹೊಂದಿರುವ ಕಾಳಜಿ ಸ್ಪಷ್ಟವಾಗುತ್ತದೆ.

ಗುಡಿಸಲು ಗೇರಿಯ ಬಡ ಮುಸ್ಲಿಂ ಜನಾಂಗದ, ಅದರಲ್ಲೂ ಮಹಿಳೆಯರ ನೋವು ನಿರಾಶೆಯ ಬದುಕನ್ನು ಕಟ್ಪಾಡಿಯವರು ಈ ಕಾದಂಬರಿಯಲ್ಲಿ ಸಮರ್ಥವಾಗಿ ನಿರೂಪಿಸಿದ್ದಾರೆ. ಇದು ಕೇವಲ ಮುಸ್ಲಿಂ ಬಡ ಮಹಿಳೆಯರ ಕಥೆಯಾಗದೆ, ಇದು ಈ ದೇಶದ ಎಲ್ಲ ಬಡವರ ಗೋಳಿನ ಚಿತ್ರಣವಾಗಿದೆ. ಅದರಂತೆ 'ಜೆಹಾದ್' ಕಾದಂಬರಿಯಲ್ಲಿ ಸಲೀನ ಟೀಚರಳ ಜೀವನ ಪ್ರೀತಿಯನ್ನು ಹೇಳುತ್ತಾ ರಷೀದನನ್ನು ಬಂಡಾಯಗಾರನನ್ನಾಗಿ ಲೇಖಕರು ರೂಪಿಸುತ್ತಾರೆ. ಮೈ ಚಳಿ ಬಿಟ್ಟು ಬದುಕುವಂತೆ ಸಲ್ಮಾಳನ್ನು ಸಿದ್ಧಗೊಳಿಸುತ್ತಾರೆ. 'ಅಮೀನಮ್ಮ' ತೀರಿಕೊಂಡಾಗ ರಷೀದ – ಸಲ್ಮಾ, ಅಣ್ಣ–ತಂಗಿಯರು ಅನಾಥರಾಗುತ್ತಾರೆ. ಇಂತಹ ಸಮಯದಲ್ಲಿ ಸಲೀನಾ ಟೀಚರ್ ರಷೀದ, ಸಲ್ಮಾರನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಲಾಲನೆ, ಪಾಲನೆ– ಪೋಷಣೆ ಮಾಡುವುದು, ಅವರಿಬ್ಬರನ್ನು ಮತೀಯ ಕಂದಕದಿಂದ ಬಿಡಿಸಿಕೊಂಡು ಬಂದು ಶಿಕ್ಷಣ ನೀಡಿ ಸ್ವತಂತ್ರವಾಗಿ ಬೆಳೆದು ನಿಲ್ಲುವಂತೆ ಸಜ್ಜುಗೊಳಿಸುವುದು ತುಂಬಾ ಮುಖ್ಯವೆನಿಸುತ್ತದೆ. ಸಲೀನ ಕ್ರಿಶ್ಚಿಯನ್ ಧರ್ಮದವಳಾದರೂ ಮಾನವೀಯತೆ, ಪ್ರೀತಿ, ತ್ಯಾಗದ ಗುಣಗಳಿಂದ ನಿಜ ಧರ್ಮವನ್ನು ಸಾಬೀತು ಪಡಿಸುತ್ತಾಳೆ.

ಒಟ್ಟಾರೆ, ಕನ್ನಡ ಬಂಡಾಯ ಕಾದಂಬರಿ ಸಾಹಿತ್ಯಕ್ಕೆ ಮುಸ್ಲಿಂ ಲೇಖಕರ ಕೊಡುಗೆ ಮಹತ್ವಪೂರ್ಣವಾದುದು. ಮನುಷ್ಯ ಜೀವನದ ನೆಲೆಗಳನ್ನು ಬೇರೆ–ಬೇರೆ ಸಂಸ್ಕೃತಿಯ ಹಿನ್ನೆಲೆಯಲ್ಲಿ ನೋಡುತ್ತ ಒಟ್ಟಾರೆ ಮನುಷ್ಯನ ಬದುಕನ್ನು ವಿಸ್ತಾರಗೊಳಿಸುತ್ತಾ, ಜೀವನ ಪ್ರೀತಿಯನ್ನು ಹುಟ್ಟು ಹಾಕುತ್ತವೆ. ಬಂಡಾಯ ಮನೋಭಾವದಿಂದ ಝುಳಪಿಸುವ ಈ ಕೃತಿಗಳು ಪ್ರಮುಖ ಮಹಿಳಾ ಸಂವೇದನೆಗಳಾಗಿವೆ.